

ಖರ್ಜೂರದ ತೋಟ

ಮಾಡಿ ತಂದರು. ಅದು ಹೀಗಿತ್ತು:

*ದಿ ವಾಲ್ ಕ್ಯಾನಾಟ್ ಫೀಲ್, ಬಟ್ ಕ್ಯಾನ್ ಕ್ರೈ ಔಟ್ ಆಫ್ ಫಿಯರ್*
*ದ ವಾಲ್ ಹ್ಯಾಸ್ ನೋ ವಾಯ್ಸ್, ಬಟ್ ಇಟ್ ಸ್ಪೀಕ್ಸ್ ಲೌಡ್ ಅಂಡ್ ಕ್ಲಿಯರ್*
*ದಿ ವಾಲ್ ಹ್ಯಾಸ್ ನೊ ಐಯ್ಸ್ , ಬಟ್ ಲುಕ್ಸ್‌ಡೌನ್ ಆನ್ ಅಸ್ ಆಲ್*
*ದಿ ವಾಲ್ ಕ್ಯಾನಾಟ್ ಮೂವ್, ಬಟ್ ಒನ್ ಡೇ ಇಟ್ ವಿಲ್ ಫಾಲ್*

ನನಗೆ ಕೂಡಲೇ 'ಸ್ಥಾವರಕ್ಕಳಿವುಂಟು..' ವಚನ ನೆನಪಾಯಿತು. ಒಂದು ಕವಿತೆಯ ಸಂಕಲನದಂತೆ ಇಡೀ ಗೋಡೆಯ ಬರಹಗಳನ್ನೆಲ್ಲ ಓದಿಕೊಂಡು ಓಡಾಡಬೇಕು ಅನಿಸಿತು.

ಜೆರುಸಲೇಮಿನ ಗಡಿಗೋಡೆಗಳ ಹಿಂದೆ ಸಾವಿರಾರು ವರ್ಷಗಳ, ಜನಾಂಗಗಳ, ಧರ್ಮಗಳ, ಸಂಸ್ಕೃತಿಗಳ, ಸಂಘರ್ಷದ ಚರಿತ್ರೆಯಿದೆ. ಗೋಡೆಯ ಮೇಲೆ ಹುಟ್ಟಿರುವ ಜೋಕು, ಕವಿತೆ, ಘೋಷಣೆಗಳು ಗೋಡೆಗಳಿಲ್ಲದ ದೇಶವನ್ನು ಹಾರೈಸುತ್ತಿವೆ. ಆ ದಿನ ಖಂಡಿತ ಬರುತ್ತದೆ ಎಂಬ ಸದಾಶಯ ಮೂಡಿತು ಗಡಿಗೋಡೆಯ ಎರಡೂ ಭಾಗದ ಸೈನಿಕರು ಪಾಳಿ ಬದಲಿಸುವಾಗ ಅಪ್ಪಿಕೊಳ್ಳುವಾಗ; ತಮ್ಮಲ್ಲೇ ಸಿಗರೇಟು ವಿನಿಮಯ ಮಾಡಿಕೊಳ್ಳುವುದನ್ನು ಕಾಣುವಾಗ.

ನಾವು ಜೆರುಸಲೇಮಿನಿಂದ ಬಂದ ಬಳಿಕ ಎರಡು ಘಟನೆಗಳು ವರದಿಯಾದವು. ಮೊದಲನೆಯದು ಜೆರುಸಲೇಮಿನ ಹಿಬ್ರೂ ವಿಶ್ವವಿದ್ಯಾಲಯದ ವಿದ್ವಾಂಸ, ಪ್ಯಾಲೆಸ್ತೇನಿಯರು ಮತ್ತು ಇಸ್ರೇಲಿಗಳು ಸಮಾನ ಗೌರವದ ಬಾಂಧವ್ಯ ಹೊಂದಬೇಕೆಂದು ಹೋರಾಡುತ್ತಿರುವ ಮಾನವ ಹಕ್ಕು ಕಾರ್ಯಕರ್ತ, ಡೇವಿಡ್ ಶುಲ್ಮನ್, ಇಸ್ರೇಲ್ ಸರ್ಕಾರ ಕೊಟ್ಟಿರುವ ಪ್ರಶಸ್ತಿಯ ಮೊತ್ತವನ್ನೆಲ್ಲ ತಮ್ಮದೇ ದೇಶದಲ್ಲಿ ನಿರಾಶ್ರಿತರಾಗಿ ಬದುಕುತ್ತಿರುವ ಪ್ಯಾಲೆಸ್ತೈನಿಗಳ ಏಳಿತಿಗಾಗಿ ಕೊಟ್ಟಿದ್ದು. ಎರಡನೆಯದು ಈಚೆಗೆ ನಿಧನರಾದ ಬಾಕ್ಸಿಂಗ್‌ಪಟು ಮಹಮದಾಲಿಯ ಶವಸಂಸ್ಕಾರದ ಸಭೆಯಲ್ಲಿ ಬರ್ಕಲಿ ನಗರದ ಯಹೂದಿ ನಾಯಕ ಮತ್ತು ಧರ್ಮಗುರು ಮೈಕೇಲ್ ಲರ್ನರ್ ಆಡಿದ ಮಾತು.

'ಒಂದು ದೇಶದ ಭದ್ರತೆ ಇರುವುದು ಇನ್ನೊಬ್ಬರ ಮೇಲೆ ಮಾಡುವ ಆಕ್ರಮಣದಲ್ಲಿ ಅಲ್ಲ. ದ್ವೇಷ ಹುಟ್ಟಿಸುವುದರಲ್ಲಿ ಅಲ್ಲ. ಎಲ್ಲರೂ ನೆಮ್ಮದಿಯಿಂದ ಬದುಕುವ ಪರಿಸರ ನಿರ್ಮಾಣ ಮಾಡುವುದರಲ್ಲಿ. ಇಸ್ರೇಲಿನ ಸಮಸ್ಯೆ ಇರುವುದು ಪ್ಯಾಲೆಸ್ತೇನಿಯರ ನೋವನ್ನು ಅರ್ಥ ಮಾಡಿಕೊಂಡು ಅವರ ನ್ಯಾಯಬದ್ಧ ಸರ್ಕಾರದ ಸ್ಥಾಪನೆಗೆ ನೆರವಾಗುವುದರಲ್ಲಿ' ಎಂದು ಲರ್ನರ್, ಇಸ್ರೇಲಿ ಪ್ರಧಾನ ಮಂತ್ರಿಗೆ ಕರೆ ನೀಡಿದ್ದರು. ಮಹಮದಾಲಿ ಮತ್ತು ಲರ್ನರ್, ಇಬ್ಬರೂ ಅಮೆರಿಕಾ ವಿಯೆಟ್ನಾಂ ಯುದ್ಧ ಸಾರಿದಾಗ ವಿರೋಧಿಸಿ ಜೈಲುಗೆ ಹೋದವರು. ಈ ಎರಡೂ ಘಟನೆಗಳನ್ನು ಗಮನಿಸಿದಾಗ, ತಂತಮ್ಮ ದೇಶಗಳು ಆಕ್ರಮಣಕಾರಿ ಆಗುವುದನ್ನು ರಾಷ್ಟ್ರಭಕ್ತಿಯ ಹೆಸರಲ್ಲಿ ಸಮರ್ಥಿಸದೆ, ಮಾನವತೆಯ ಕಾಳಜಿಯಲ್ಲಿ ವಿಮರ್ಶಿಸುವ ವಿವೇಕವಿನ್ನೂ ಉಳಿದಿದೆ ಎಂದೆನ್ನಿಸಿತು.

ಜೆರುಸಲೇಂ ಗೋಡೆಗಳ ನಗರ ಮಾತ್ರವಲ್ಲ, ಗೋಡೆಗಳನ್ನು ಕೆಡವಿಕೊಂಡು ಬಿಡುಗಡೆಯ ಕನಸನ್ನೂ ಕಾಣುತ್ತಿರುವ ನಗರ ಕೂಡ. ಮತ್ತೊಮ್ಮೆ ಜೆರುಸಲೇಮಿಗೆ ಹೋದರೆ, ಇಂಥ ಕನಸುಳ್ಳ ಜನರನ್ನೆಲ್ಲ ವಿರಾಮವಾಗಿ ಭೇಟಿಯಾಗಬೇಕು ಅನಿಸುತ್ತಿದೆ.

■




ವಶೀಕರಣ ಸ್ಪೆಷಲಿಸ್ಟ್



ಶ್ರೀಯುತ ಮಂಜುನಾಥ ಗುರೂಜಿಯವರಿಂದ

ಇಲ್ಲಿದೆ ದೇವಿ ಅಘೋರಿ ಶಕ್ತಿಗಳ ಭಂಡಾರ, ದುಷ್ಟ ಅಘೋಚರ ಶಕ್ತಿಗಳು ಆಡಿಸುವ ಆಟದಿಂದ ಮನುಷ್ಯನು ತಾನು ಬಯಸಿದಂತೆ ಸುಖ ಜೀವನವನ್ನು ಸಾಗಿಸಲು ಸಿದ್ಧಿಸಾಧಕರ ಸಹಕಾರ, ನಿಮ್ಮ ಜೀವನಕ್ಕೆ ಪ್ರಮುಖವಾದದ್ದು, ಅಂತಹ ಸಿದ್ಧಿಸಾಧಕರಾದ

"ಶ್ರೀ ಮಂಜುನಾಥ ಗುರೂಜಿ"

ಇವರಿಂದ ಮಾತ್ರ ಈ ಸಾಧನೆ ಸಾಧ್ಯ

ಇವರು ಕೇರಳ ಬಂಗಾಳಿ, ಅಘೋರಿ, ನಾಗಸಾಧುಗಳ ಋಷಿಮುನಿಗಳ ಬಳಿ ಪ್ರಾಚೀನ ತಾಳೆಗ್ರಂಥದ ರಹಸ್ಯ, ಮಂತ್ರ-ತಂತ್ರ ದೇವಿಶಕ್ತಿ ಕಠೋರ ಸಾಧನೆಯಿಂದ ಯಾಗ ಯಜ್ಞಗಳ ಮೂಲಕ ಸಿದ್ಧಿ ಮಾಡಿಕೊಂಡಿರುತ್ತಾರೆ.

ವಿದ್ಯೆ, ಉದ್ಯೋಗ, ಶತ್ರುಭಯ, ಪ್ರೇಮವಿಚಾರ, ವಿವಾಹ, ಸಂತಾನ, ಮಾಟಮಂತ್ರ, ಶತ್ರುನಾಶ, ಲೈಂಗಿಕ, ಸಂಮ್ಮೋಹಿನಿ, ಜಾಗದ ವಿಚಾರ, ಬಿಸಿನೆಸ್, ವಿದೇಶ ಪ್ರಯಾಣ, ಸಾಲಭಾದೆ, ಕೋರ್ಟ್‌ಕೇಸ್, ಗುಪ್ತಸಮಸ್ಯೆ, ಇನ್ನಿತರ ಯಾವುದೇ ಕಠಿಣ ಸಮಸ್ಯೆಯಿರಲಿ ಸಿದ್ಧಿಸಾಧನೆಯಿಂದ ಶಾಸ್ತ್ರೀಯ ಪದ್ಧತಿಯಲ್ಲಿ ಕೆಲವೇ ಗಂಟೆಗಳಲ್ಲಿ ಪರಿಹಾರ ಮಾಡುತ್ತಾರೆ.

ವಿಶೇಷ ಸೂಚನೆ: ಜನವಶೀಕರಣ, ಲಕ್ಷ್ಮೀವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣಗಳಿಗೆ ಕೆಲವೇ ಗಂಟೆಗಳಲ್ಲಿ ಪರಿಹಾರ.

ನಮ್ಮನ್ನು ಭೇಟಿಯಾಗುವ ಅವಶ್ಯಕತೆಯಿಲ್ಲ ಒಮ್ಮೆ ಕರೆಮಾಡಿ ನಿಮ್ಮೆಲ್ಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪಡೆಯಿರಿ.

ನಮ್ಮಲ್ಲಿ ಕೇಳುವ ನಿಮ್ಮೆಲ್ಲ ವಿಷಯಗಳನ್ನು ಗುಪ್ತವಾಗಿಡಲಾಗುವುದು.

ನಿಮ್ಮ ಸಮಸ್ಯೆಗಳನ್ನು ಯಾರಿಂದಲೂ ಬಗೆಹರಿಸಲು ಸಾಧ್ಯವಿಲ್ಲ, ನಮ್ಮಿಂದ ಮಾತ್ರಸಾಧ್ಯ ಪರಿಹಾರ ಬೇಕಿದ್ದಲ್ಲಿ ಒಮ್ಮೆ ಕರೆಮಾಡಿ

ಶ್ರೀ ಮಂಜುನಾಥ ಗುರೂಜಿ

9886999747